<u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 449 |
| ಮಾನ್ಯ ಸದಸ್ಯರ ಹೆಸರು | ಶ್ರೀ ಡಿ.ಎಸ್ ಅರುಣ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 19.02.2024 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ | ಆರೋಗ್ಯ ಇಲಾಖೆಯ ಆಹಾರ ಸಂರಕ್ಷಣಾ ವಿಭಾಗದಲ್ಲಿ ಅಂಕಿತ ಅಧಿಕಾರಿಗಳನ್ನಾಗಿ ಕಾರ್ಯನಿರ್ವಹಿಸುತ್ತಿರುವ ವೈದ್ಯರುಗಳು ನಿಯಮ ಬಾಹಿರವಾಗಿ ಹಲವಾರು ಭತ್ಯೆಗಳನ್ನು ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ವೈದ್ಯರುಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ (ಸಂಪೂರ್ಣ ವಿವರ ಒದಗಿಸುವುದು) | ಬಂದಿದೆ.<br><br>ವಿಶೇಷ ಭತ್ಯೆಯ ಉಪ ಶೀರ್ಷಿಕೆಯನ್ನು ಹೆಚ್.ಆರ್.ಎಂ.ಎಸ್ ನಲ್ಲಿ ಸ್ಥಗಿತಮಾಡಲಾಗಿದ್ದು, ಡಿಸೆಂಬರ್ 2019 ರ ಮಾಹೆಯಿಂದ ವೈದ್ಯ ವೃತ್ತಿಗೆ ಅನುಸಾರವಾಗಿ ವಿಶೇಷ ಭತ್ಯೆಯನ್ನು ಸೆಳೆದಿರುವ ವೈದ್ಯರುಗಳಿಂದ, ನಿಯಮಬಾಹಿರವಾಗಿ ಸೆಳೆದಿರುವ ಭತ್ಯೆಯನ್ನು ಅಧಿಕಾರಿಗಳಿಂದ ಹಿಂಪಡೆದು, ಸರ್ಕಾರಕ್ಕೆ ಜಮಾ ಮಾಡಲು ಕ್ರಮವಹಿಸಲಾಗುವುದು. |
| ಆ | ಮಾಸಿಕವಾಗಿ ಆಹಾರ ಮಾದರಿಗಳನ್ನು ತೆಗೆದು ವಿಶ್ಲೇಷಣೆಗೆ ಕಳುಹಿಸಿಕೊಡದಿರುವ ಆಹಾರ ಸಂರಕ್ಷಣಾಧಿಕಾರಿಗಳ ಸಂಪೂರ್ಣ ವಿವರ ಒದಗಿಸುವುದು; ಈ ಬಗ್ಗೆ ಸದರಿಯವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗುವುದು | ಮಾಸಿಕವಾಗಿ ಆಹಾರ ಮಾದರಿಗಳನ್ನು ತೆಗೆದು ವಿಶ್ಲೇಷಣೆಗೆ ಕಳುಹಿಸಿಕೊಡುವ ಗುರಿ ಭಾಗಶಃ ತಲುಪಲಾಗಿದೆ. ಗುರಿ ತಲುಪದೆ ಇರುವ ಆಹಾರ ಸುರಕ್ಷತಾಧಿಕಾರಿಗಳಿಗೆ ಎಚ್ಚರಿಕೆ ನೀಡಿ ಗುರಿ ತಲುಪಲು ಸೂಚಿಸಲಾಗಿದೆ. ಮಾಸಿಕ ಪ್ರಗತಿ ಪರಿಶೀಲನಾ ಸಭೆಗಳನ್ನು ಕೈಗೊಂಡು ಪರಿಶೀಲಿಸಿ ಮಾರ್ಗದರ್ಶನ ನೀಡಲಾಗುತ್ತಿದೆ. |
| ಇ | ಆರೋಗ್ಯ ಇಲಾಖೆಯಲ್ಲಿ ವೈದ್ಯರ ಕೊರತೆಯಿದ್ದರೂ ಆಹಾರ ಸುರಕಷತಾ ವಿಭಾಗದಲ್ಲಿ ನೂರಾರು ವೈದ್ಯರು ತಮಗೆ ಸಂಬಂಧವಿಲ್ಲದ ಕೆಲಸಕಾರ್ಯಗಳನ್ನು (ಅಂಕಿತ ಅಧಿಕಾರಿಗಳಾಗಿ-ಆಹಾರ ಸುರಕ್ಷಣಾಧಿಕಾರಿಗಳಾಗಿ) ಮಾಡುತ್ತಿದ್ದು, ಇವರುಗಳ ಸೇವೆಯನ್ನು ಹಿಂದಕ್ಕೆ ಪಡೆದು ಮಾತೃ ಇಲಾಖೆಗೆ ಕಳುಹಿಸಲು ಸರ್ಕಾರಕ್ಕೆ ತೊಂದರೆ ಇದೆಯೇ; (ವಿವರ ಒದಗಿಸುವುದು) | ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯಲ್ಲಿ ಅಂಕಿತಾಧಿಕಾರಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳ ಬದಲಾಗಿ, ಸದರಿ ಹುದ್ದೆಗೆ ಉಪ ವಿಭಾಗಾಧಿಕಾರಿ ಮಟ್ಟದ ಅಧಿಕಾರಿಯನ್ನು ಹೆಚ್ಚುವರಿ ಪ್ರಭಾರದಲ್ಲಿ ನೇಮಿಸುವ ಬಗ್ಗೆ ಪರಿಶೀಲನೆಯಲ್ಲಿದೆ. |

| | | |
|---|---|---|
| ಈ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸುಮಾರು ಐದು ವರ್ಷಕ್ಕಿಂತ ಹೆಚ್ಚಿಗೆ ಒಂದೇ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಆಹಾರ ಸಂರಕ್ಷಣಾಧಿಕಾರಿಗಳ ವಿವರ ಒದಗಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಸದರಿಯವರನ್ನು ಬೇರೆ ವಿಭಾಗಗಳಿಗೆ ವರ್ಗಾಯಿಸಲು ತೊಂದರೆ ಇದೆಯೇ? (ವಿವರ ಒದಗಿಸುವುದು) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಯಾವುದೇ ಆಹಾರ ಸುರಕ್ಷತಾಧಿಕಾರಿ ಐದು ವರ್ಷಕ್ಕಿಂತ ಹೆಚ್ಚಿಗೆ ಒಂದೇ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವುದಿಲ್ಲ. |

ಆಕುಕ 2 ಎಸ್‌ಬಿವಿ 2024

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು